# ‘ಅಭಿವೃದ್ಧಿ’ ಎನ್ನುವ ರುಚಿಕರ ಸುಳ್ಳು!

ಜಾಗತೀಕರಣದ ಭರಾಟೆಯಲ್ಲಿ ನಗರ ಮತ್ತು ಹಳ್ಳಿಗಳ ನಡುವಿನ ಅಂತರ ವೇಗವಾಗಿ ಅಳಿಸಿಹೋಗುತ್ತಿದ್ದರೂ, ಈ ವೇಗ ಅಭಿವೃದ್ಧಿಯ ವಿಷಯದಲ್ಲಿ ಸಾಧ್ಯವಾಗುತ್ತಿಲ್ಲ. ‘ಕೆಟ್ಟು ಪಟ್ಟಣ ಸೇರು’ ಎನ್ನುವುದು ಈ ಹೊತ್ತಿಗೂ ಹೆಚ್ಚು ಹೊಂದುವ ಮಾತು.

ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತದ ಯುವಶಕ್ತಿಯ ಪ್ರಾಬಲ್ಯದ ಹಿನ್ನೆಲೆಯಲ್ಲಿ ‘ಡಿಜಿಟಲ್ ಇಂಡಿಯಾ’ ಘೋಷಣೆ ಜಗತ್ತಿನಾದ್ಯಂತ ಪ್ರಕಾಶಿಸುತ್ತಿರುವ ದಿನಗಳಿವು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ‘ಡಿಜಿಟಲ್ ಇಂಡಿಯಾ’ ಘೋಷಣೆಯನ್ನು ವಿಶ್ವದ ವಿವಿಧೆಡೆಗಳಲ್ಲಿ ಪ್ರಚುರಪಡಿಸುತ್ತ, ಭಾರತದ ನಾಳೆಗಳ ಬಗ್ಗೆ ಹೊಸ ಕನಸುಗಳನ್ನು ಹುಟ್ಟುಹಾಕುತ್ತಿದ್ದಾರೆ. ಆದರೆ, ಈ ಕನಸುಗಳು ನನಸಾಗಲು ಅಗತ್ಯವಾದ ಭೂಮಿಕೆ ಎಷ್ಟರಮಟ್ಟಿಗೆ ಸಿದ್ಧವಾಗಿದೆ ಎಂದು ನೋಡಿದರೆ ಈ ಹೊತ್ತಿನ ವರ್ತಮಾನ ಆಶಾದಾಯಕವಾಗಿಯೇನೂ ಇಲ್ಲ. ‘ಡಿಜಿಟಲ್ ಇಂಡಿಯಾ’ ಪ್ರಭಾವಳಿಯ ಹೊಳಪಿನ ಸಂದರ್ಭದಲ್ಲೇ ಪ್ರಕಟಗೊಂಡಿರುವ 2011ರ ಸಾಮಾಜಿಕ, ಆರ್ಥಿಕ ಮತ್ತು ಜಾತಿ ಗಣತಿಯ ವಿವರಗಳು ಭಾರತದ ಮತ್ತೊಂದು ಮಗ್ಗುಲನ್ನು ಅನಾವರಣಗೊಳಿಸುವಂತಿವೆ. ಪ್ರತಿ ಹತ್ತು ವರ್ಷಕ್ಕೊಮ್ಮೆ ನಡೆಯುವ ಈ ಗಣತಿಯ ವಿವರಗಳು ಸದ್ಯಕ್ಕೆ ಕರ್ನಾಟಕಕ್ಕೆ ಸಂಬಂಧಿಸಿದಂತೆ ಬಿಡುಗಡೆಯಾಗಿದ್ದು, ಉಳಿದ ರಾಜ್ಯಗಳು ತಮ್ಮ ಸ್ಥಿತಿಗತಿಯನ್ನು ಇನ್ನೂ ಪ್ರಕಟಿಸಬೇಕಾಗಿದೆ. ಅಗುಳಿನ ಮೇಲೆ ಅನ್ನದ ಪರೀಕ್ಷೆ ಎನ್ನುವಂತೆ ಕರ್ನಾಟಕದ ಸಾಮಾಜಿಕ ಪ್ರಗತಿಯ ನೆಲೆಗಟ್ಟಿನಲ್ಲಿ ಈ ಹೊತ್ತಿನ ಭಾರತೀಯ ಸಮಾಜವನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವೇನಲ್ಲ.

ಲಿಂಗಾನುಪಾತದ ಹೆಚ್ಚಳ, ನಿರೀಕ್ಷಿತ ಮಟ್ಟದಲ್ಲಿ ಸಾಕ್ಷರತೆಯ ಸಾಧನೆ ಸಾಧ್ಯವಾಗದಿರುವುದು, ದಲಿತರ ಅಕ್ಷಯಪಾತ್ರೆಯಂಥ ಸಂಕಷ್ಟಗಳು– ಇವೆಲ್ಲ ಕರ್ನಾಟಕದ ವರ್ತಮಾನದ ಬಗ್ಗೆ ಆತಂಕ ಹುಟ್ಟಿಸುವಂತಿವೆ. 2001ರಲ್ಲಿ ಪ್ರತಿ ಸಾವಿರ ಪುರುಷರಿಗೆ 965 ಮಹಿಳೆಯರಿದ್ದರು. ಈ ಸಂಖ್ಯೆ 2011ರ ಗಣತಿಯಲ್ಲಿ 949.5ಕ್ಕೆ ಇಳಿದಿದೆ. ಹೆಣ್ಣುಮಕ್ಕಳನ್ನು ಬೆಂಬಲಿಸುವ ಕೇಂದ್ರ ಮತ್ತು ರಾಜ್ಯ ಸರ್ಕಾರದ ಹಲವು ಜನಪ್ರಿಯ ಯೋಜನೆಗಳ ನಡುವೆಯೂ ಲಿಂಗಾನುಪಾತದ ಪ್ರಮಾಣ ಸುಧಾರಿಸಿಲ್ಲ. ಆಧುನಿಕ ಸಂದರ್ಭದಲ್ಲೂ ಹೆಣ್ಣುಮಕ್ಕಳ ಕುರಿತ ಸಾಂಪ್ರದಾಯಿಕ ಮನೋಭಾವ ಇನ್ನೂ ಕಟುವಾಗುತ್ತಿರುವುದು, ಭ್ರೂಣಹತ್ಯೆ ಕದ್ದೂಮುಚ್ಚಿ ನಡೆಯುತ್ತಿರುವುದು ಕಳವಳಕಾರಿ.

ಸಾಕ್ಷರತೆಯ ಅಂಕಿ ಅಂಶಗಳು ಕೂಡ ಆಶಾದಾಯಕವಾಗಿಲ್ಲ. ‘ಬುದ್ಧಿವಂತರ ಜಿಲ್ಲೆ’ ಎನ್ನುವ ವಿಶೇಷಣದ ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ಶೇಕಡಾ 17ರಷ್ಟು ಅನಕ್ಷರಸ್ಥರಿದ್ದಾರೆ. ಯಾದಗಿರಿ ಜಿಲ್ಲೆಯಲ್ಲಿ ಅತಿ ಹೆಚ್ಚು ಅನಕ್ಷರಸ್ಥರಿದ್ದಾರೆ (ಶೇ 43). ರಾಜ್ಯದಲ್ಲಿ ಒಟ್ಟಾರೆ ಶೇಕಡಾ 31ರಷ್ಟು ಮಂದಿ ಇನ್ನೂ ಸಾಕ್ಷರತೆಯಿಂದ ದೂರವೇ ಉಳಿದಿದ್ದಾರೆ.

ರಾಜ್ಯದ ಒಟ್ಟಾರೆ ಜನಸಂಖ್ಯೆಯಲ್ಲಿ ದಲಿತರು ಅಂದಾಜು ನಾಲ್ಕನೇ ಒಂದು ಭಾಗದಷ್ಟಿದ್ದಾರೆ. ಅವರ ಕಲ್ಯಾಣಕ್ಕಾಗಿ ಅನೇಕ ಅಭಿವೃದ್ಧಿ ಚಟುವಟಿಕೆಗಳು ಚಾಲ್ತಿಯಲ್ಲಿದ್ದರೂ ಫಲಶ್ರುತಿ ಹೇಳಿಕೊಳ್ಳುವಂತಿಲ್ಲ. ದಲಿತರು ಹೆಚ್ಚಿನ ಸಂಖ್ಯೆಯಲ್ಲಿರುವ ಪ್ರದೇಶಗಳಲ್ಲಿ ಇತರ ಪ್ರದೇಶಗಳಿಗಿಂತ ಹೆಚ್ಚಿನ ಬಡತನ ಇರುವುದು ಸಾಮಾನ್ಯ ಎನ್ನುವಂತಾಗಿದೆ. ರಾಜ್ಯದ 6 ಲಕ್ಷ ಮಂದಿ ಇನ್ನೂ ವಸತಿ ರಹಿತರಾಗಿದ್ದಾರೆ.

ಮೂಲಭೂತ ಸೌಕರ್ಯಗಳಿಂದ ಸಂಪರ್ಕ– ಸಂವಹನದ ವಿಷಯಕ್ಕೆ ಬಂದರೆ ಬೇರೆಯದೇ ಅಂಕಿ ಅಂಶಗಳು ಎದುರಾಗುತ್ತವೆ. ರಾಜ್ಯದಲ್ಲಿ ನೂರಕ್ಕೆ ಎಪ್ಪತ್ತೇಳು ಮಂದಿ ಮೊಬೈಲ್ ಫೋನ್ ಬಳಸುತ್ತಾರೆ. ಅಂದರೆ ಪ್ರತಿ ಮೂರರಲ್ಲಿ ಎರಡು ಮನೆಗಳು ಮೊಬೈಲ್ ಫೋನ್‌ಗಳನ್ನು ಹೊಂದಿವೆ. ಕಳೆದೊಂದು ದಶಕದಲ್ಲಿ ರಾಜ್ಯದ ಕುಗ್ರಾಮಗಳನ್ನು ಕೂಡ ಮೊಬೈಲ್ ಫೋನ್‌ಗಳು ತಲುಪಿರುವುದು ಗಮನಾರ್ಹ. ಆದರೆ, ಆರೇಳು ದಶಕಗಳಲ್ಲಿ ಲಕ್ಷ ಲಕ್ಷ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ ನಂತರವೂ ಮೂಲಭೂತ ಸೌಕರ್ಯಗಳು ಅನೇಕ ಗ್ರಾಮಗಳನ್ನು ಮುಟ್ಟುವಲ್ಲಿ ವಿಫಲವಾಗಿವೆ ಎನ್ನುವುದನ್ನು ನೆನಪಿಸಿಕೊಳ್ಳಬೇಕು. ಸಂಪರ್ಕ – ಸಂವಹನ ಕ್ರಾಂತಿಯನ್ನೇ ಪ್ರಗತಿ ಎನ್ನುವುದಾದರೆ, ಅದು ಅಭಿವೃದ್ಧಿಯ ಹೊರ ಆವರಣ ಮಾತ್ರವಾಗಿದೆ. ಜಾಗತೀಕರಣದ ಭರಾಟೆಯಲ್ಲಿ ನಗರ ಮತ್ತು ಹಳ್ಳಿಗಳ ನಡುವಿನ ಅಂತರ ವೇಗವಾಗಿ ಅಳಿಸಿಹೋಗುತ್ತಿದ್ದರೂ, ಈ ವೇಗ ಅಭಿವೃದ್ಧಿಯ ವಿಷಯದಲ್ಲಿ ಸಾಧ್ಯವಾಗುತ್ತಿಲ್ಲ. ‘ಕೆಟ್ಟು ಪಟ್ಟಣ ಸೇರು’ ಎನ್ನುವುದು ಈ ಹೊತ್ತಿಗೂ ಹೆಚ್ಚು ಹೊಂದುವ ಮಾತು.

ಲಿಂಗಾನುಪಾತ ಹೆಚ್ಚಳ, ಅನಕ್ಷರತೆ, ಬಡತನ, ನಿರ್ವಸತಿ, ವಲಸೆ– ಇವೆಲ್ಲವೂ ಒಂದೆಡೆ ಕಣ್ಣಿಗೆ ರಾಚುತ್ತಿದ್ದರೆ, ಮತ್ತೊಂದೆಡೆ ಇವನ್ನು ಮರೆಮಾಚುವಂತೆ ‘ಡಿಜಿಟಲ್ ಇಂಡಿಯಾ’ದ ಪ್ರಭಾವಳಿ ಕಾಣಿಸುತ್ತಿದೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತದ ತರುಣ ತರುಣಿಯರು ತಮ್ಮದೇ ಆದ ಛಾಪು ಮೂಡಿಸಿರುವ ಬಗ್ಗೆ ನಾವು ಹೆಮ್ಮೆಪಡುವುದು ಅಸಹಜವೇನಲ್ಲ. ಆದರೆ, ಈ ಹೆಮ್ಮೆ ತಳಮಟ್ಟದ ಸಮಸ್ಯೆಗಳನ್ನು ಮರೆಸುವಂತಾಗಬಾರದು. ಮೊಬೈಲ್ ಫೋನ್ ಬಳಕೆ ಹೆಚ್ಚಾಗುತ್ತಿರುವುದು, ನಗರಗಳ ಬೆಳವಣಿಗೆ– ಇವೆಲ್ಲ ಅಭಿವೃದ್ಧಿಯ ಸಂಕೇತಗಳೇನೂ ಅಲ್ಲ. ನಿಜವಾದ ಅಭಿವೃದ್ಧಿ ಇರುವುದು ಮಹಿಳೆಯರು, ಮಕ್ಕಳು ಮತ್ತು ದಲಿತರನ್ನು ಮುನ್ನಡೆಸುವುದರಲ್ಲಿ ಹಾಗೂ ಅನಕ್ಷರತೆಯನ್ನು ತೊಡೆದುಹಾಕುವುದರಲ್ಲಿ. ಈ ನಿಟ್ಟಿನಲ್ಲಿ ಆಗಬೇಕಾದ ಕೆಲಸ ಎಷ್ಟು ದೊಡ್ಡದು ಎನ್ನುವುದರ ಆತ್ಮಾವಲೋಕನಕ್ಕೆ 2011ರ ಗಣತಿಯ ಅಂಕಿಅಂಶಗಳು ಪ್ರೇರಣೆ ಒದಗಿಸುವಂತಿವೆ.

■ ರಘುನಾಥ ಚ.ಹ.



ಈಶ್ವರ್